



ಹರಿಲಾಲರು ಅಮಲಿನಲ್ಲಿದ್ದಾರೆಂದು ಅನ್ನಿಸುತ್ತಿರಲಿಲ್ಲ. ಅವರು ಅಮಲಿನಲ್ಲಿದ್ದಾಗ ಅವರ ಧ್ವನಿ ಅಡಗಿದಂತೆ ತೋರುತ್ತಿತ್ತು. ಹರಿಲಾಲರು ನಶೆಯಲ್ಲಿದ್ದಾಗ ರಂಪಾಟವನ್ನೂ ಮಾಡುತ್ತಿದ್ದರು ಎಂದು ಸರಸ್ವತಿ ಕೇಳಿದ್ದಳು. ಆದರೆ ಈಗ ಅವರ ಧ್ವನಿಯಲ್ಲಿ ಇಂಥ ಕುರುಹುಗಳಿರಲಿಲ್ಲ.

ದೇವದಾಸರ ಧ್ವನಿ ಕೋಲಾಹಲ ಮಾಡುತ್ತಿರುವಂತೆ ಇದೆಯಲ್ಲ? ದೇವದಾಸರು ಮಾವನವರಿಗೆ ಏನಾದರೂ ಹೇಳುತ್ತಿರುವರೇ?

ಇನ್ನು ಸರಸ್ವತಿಯಿಂದ ತಡೆದುಕೊಳ್ಳಲಾಗಲಿಲ್ಲ. ಅವಳು ಮೆಲ್ಲನೆ ಬಾಗಿಲನ್ನು ತಟ್ಟಿದಳು. ನಂತರ ಮೆಲ್ಲನೆ ಕೇಳಿದಳು

'ಅಪ್ಪಾ, ನೀವಿಲ್ಲಿದ್ದೀರ?'

ಒಳಗೆ ಇದ್ದಕ್ಕಿದ್ದಂತೆ ಶಾಂತಿ ನೆಲೆಸಿತು. ಸರಸ್ವತಿ ಮತ್ತೊಮ್ಮೆ ಬಾಗಿಲನ್ನು ತಟ್ಟಿದಳು. ಸ್ವಲ್ಪ ಹೊತ್ತಿಗೆ ಬಾಗಿಲು ಸ್ವಲ್ಪ ತೆರೆದುಕೊಂಡಿತು, ನಡುವೆ ದೇವದಾಸರು ನಿಂತಿದ್ದರು.

'ಸರಸ್ವತಿ!' ದೇವದಾಸರು ಬೇಸರದಿಂದ ಹೇಳಿದರು.

'ಈಗ ನನ್ನ ಅಣ್ಣನಿಂದ ನಿನಗೇನು ಕೆಲಸವಿದೆ? ಅವರು ತುಂಬಾ ದಣಿದಿದ್ದಾರೆ.'

'ಅವರು ನನಗೆ ತಮ್ಮ ಬಟ್ಟೆಗಳನ್ನು ಸ್ವಚ್ಛ ಮಾಡಲು ಕೊಟ್ಟಿದ್ದರು...' ತಾನು ಕದ್ದುಮುಚ್ಚಿ ಗಮನಿಸುತ್ತಿರುವುದನ್ನು ತಿಳಿದು ಅವಳಿಗೆ ಸಂಕೋಚವಾಯಿತು.

'ಸರಿ. ಈಗ ಅವರಿಗೆ ಈ ಬಟ್ಟೆಗಳ ಅಗತ್ಯವಿಲ್ಲ. ಬೆಳಿಗ್ಗೆ ಕೊಡು. ನೀನೀಗ ಹೋಗು...' ಹೀಗೆಂದು ದೇವದಾಸರು ಬಾಗಿಲನ್ನು ಮುಚ್ಚುತ್ತಾ ಹೇಳಿದರು, 'ನಾವೀಗ ಕೆಲಸವನ್ನು ಮಾಡುತ್ತಿದ್ದೇವೆ.'

ಸರಸ್ವತಿ ನೋಡುತ್ತಲೇ ನಿಂತುಬಿಟ್ಟಳು. ಬಾಗಿಲು ಮುಚ್ಚಿತು. ಅವಳು ಹೊರಳಿ ಒಳಗೆ ಹೋದಳು. ಅವಳ ಮನಸ್ಸಿನಲ್ಲಿ ತಳಮಳವುಂಟಾಗಿತ್ತು. ಮಾವನ ಬಗ್ಗೆ ತನಗೇಕೆ ಇಷ್ಟು ಚಿಂತೆ ಕಾಡುತ್ತಿದೆ? ಅವಳ ಮನಸ್ಸಿನಲ್ಲಿ ವಿಷಾದದ ರೇಖೆಯೊಂದು ಮೂಡಿತು.

* * *

ಮರುದಿನ ಮಾವ ಮುಖ್ಯ ಕೋಣೆಯಲ್ಲಿ ಕೂತಿರುವುದನ್ನು ಸರಸ್ವತಿ ನೋಡಿದಳು. ಅವರ ಮುಖದಲ್ಲಿ ಅಪಾರ ಶೋಕ ಮತ್ತು ಗಾಢ ವ್ಯಥೆ ಮನೆ ಮಾಡಿತ್ತು. ಅವರ ಕಣ್ಣುಗಳು ಒಳಗೆ ಹೂತು ಹೋಗಿದ್ದವು. ಅವರು ಕಣ್ಣುಗಳನ್ನು ಮುಚ್ಚಿ ಕುಳಿತಿದ್ದರು. ಅವರ ಗಂಟು ಮತ್ತು ಚೀಲ ಅವರ ಕಾಲುಗಳ ಬಳಿ ಇದ್ದವು. ದೇವದಾಸರು ಅದೇ ಕೋಣೆಯಲ್ಲಿ ಸೋಫಾದಲ್ಲಿ ಕೂತು ಪತ್ರಿಕೆಯನ್ನು ಓದುತ್ತಿದ್ದರು.

'ಅಪ್ಪಾ...' ಸರಸ್ವತಿ ಮೆಲ್ಲನೆ ಮಾವನವರ ಗಮನವನ್ನು ಸೆಳೆದಳು.

ಹರಿಲಾಲ ಕಣ್ಣುಗಳನ್ನು ತೆರೆದ. ಸರಸ್ವತಿ ಎರಡು ಹೆಜ್ಜೆ ಹಿಂದಕ್ಕೆ ಸರಿದಳು. ಅವಳು ಮಾವನ ಇಂಥ ಕಣ್ಣುಗಳನ್ನು ಈ ಹಿಂದೆ ನೋಡಿರಲಿಲ್ಲ. ಅವಳು ಭಯದಿಂದ ಕಂಪಿಸಿದಳು.

'ನಿಮ್ಮ ಈ ಬಟ್ಟೆಗಳು...'ಅವಳು ಸ್ವಚ್ಛ ಮಾಡಿ, ಇಸ್ತ್ರಿ ಮಾಡಿದ ಎರಡು ಬಟ್ಟೆಗಳನ್ನು ಮಾವನವರಿಗೆ ಕೊಟ್ಟಳು.

'ಕೊಡು ಮಗಳೇ. ನೀನು ನೆನಪು ಮಾಡಿದ್ದು ಒಳ್ಳೆಯದಾಯಿತು.' ಹರಿಲಾಲ ಬಟ್ಟೆಗಳನ್ನು ತೆಗೆದುಕೊಂಡು ಚೀಲದಲ್ಲಿಟ್ಟುಕೊಂಡ. ನಂತರ ದೇವದಾಸನನ್ನು ನೋಡಿದ. ದೇವದಾಸನೂ ಹರಿಲಾಲನನ್ನೇ ನೋಡುತ್ತಿದ್ದ.

'ಸರೂ ಮಗಳೇ' ಹರಿಲಾಲ ಎದ್ದು ನಿಂತು ಮುಂದಕ್ಕೆ ಹೆಜ್ಜೆಗಳನ್ನು ಹಾಕುತ್ತಾ ಹೇಳಿದ, 'ನಾನಿನ್ನು ಬರುತ್ತೇನೆ'

ಸರಸ್ವತಿ ಕಲ್ಲಿನಂತೆ ನಿಂತಳು. ಮಾವನವರು ಹೀಗೇಕೆ ಹೇಳುತ್ತಿದಾರೆ? ಹೀಗೆ ಅಕಸ್ಮಾತ್ ಯಾಕೆ ಹೋಗುತ್ತಿದ್ದಾರೆ? ಬಾಪೂ ಅವರ ಅಂತಿಮ ಸಂಸ್ಕಾರದ ವಿಧಿವಿಧಾನಗಳು ಉಳಿದಿವೆಯೇ? ಹರಿಲಾಲ ಹೋಗುತ್ತಿರುವುದು ಯಾಕೆ? ಅವಳು ದೇವದಾಸನನ್ನು ನೋಡಿದಳು. ದೇವದಾಸ ಎದ್ದು ನಿಂತು ಅಣ್ಣನನ್ನು ತಡೆಯಲು ಏನೋ ಹೇಳುತ್ತಿರುವನೇ? ಅವನೇಕೆ ಅವರನ್ನು ತಡೆಯುತ್ತಿಲ್ಲ? ಸರಸ್ವತಿಯ ಮನಸ್ಸಿನಲ್ಲಿ ಅಸಂಖ್ಯ ಪ್ರಶ್ನೆಗಳು ಉದ್ಭವಿಸಿದವು. ಆದರೆ ಅವಳು ಹೇಳದಾದಳು. ಅವಳ ಅಧರಗಳು ಕಂಪಿಸಿದವು. ಕಣ್ಣುಗಳು ಮತ್ತೆ ತುಂಬಿ ಬಂದವು. ಅವಳು ಹೊರಳಿ ನಿಂತು ಬಿಕ್ಕಳಿಸಿದಳು.

'ಅಣ್ಣಾ!' ದೇವದಾಸ ಮೆಲ್ಲನೆ ಹೇಳಿದ, 'ನಿಮ್ಮ ಆರೋಗ್ಯ ಸರಿಯಿಲ್ಲ.'

'ಆರೋಗ್ಯ?' ಹರಿಲಾಲ ಭಯಾನಕವಾಗಿ ನಕ್ಕ, 'ದೇವದಾಸ, ನನ್ನ ಚಿಂತೆಯನ್ನು ಮಾಡಬೇಡ. ನನ್ನ ಹಣೆಯಲ್ಲಿ ಜೀವಮಾನದುದ್ದಕ್ಕೂ ಅಲೆಯುವುದೇ ಬರೆದಿದೆ.'

ದೇವದಾಸ ಮೌನವನ್ನು ವಹಿಸಿದ. ಅವನು ಅಣ್ಣನನ್ನು ಎವೆಯಿಕ್ಕದೆ ನೋಡುತ್ತಿದ್ದ. ಕೋಣೆಯಲ್ಲಿ ನಿಶ್ಶಬ್ದತೆ ಕವಿಯಿತು. ಹರಿಲಾಲ ಮುಖವನ್ನು ತಿರುಗಿಸಿದ, ನಂತರ ಮೆಲ್ಲಮೆಲ್ಲನೆ ಹೆಜ್ಜೆಗಳನ್ನು ಹಾಕುತ್ತಾ ಹೊರಗೆ ಹೋದ. ಅವನ ಕೈಯಲ್ಲಿ ಅದೇ ಚೀಲ ಮತ್ತು ಬಗಲಿನಲ್ಲಿ ಪೊಟ್ಟಣವಿತ್ತು.

ಈ ಘಟನೆ ನಡೆದು ಐದು ತಿಂಗಳುಗಳಷ್ಟೇ ಕಳೆದಿದ್ದವು.

ವಿಶ್ವ ವಂದನೀಯ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ದೇಹ ಪಂಚಭೂತಗಳಲ್ಲಿ ಸೇರಿ ಕೆಲವೇ ದಿನಗಳಾಗಿದ್ದವು. ಇಡೀ ರಾಷ್ಟ್ರ ತಲೆಬಾಗಿ ತುಂಬಿದ ಹೃದಯದಿಂದ ಬಾಪೂ ಅವರನ್ನು ಬೀಳ್ಕೊಟ್ಟಿತ್ತು. ಇಂಥ ಶ್ರೇಷ್ಠ ಪುರುಷರ ಉತ್ತರಾಧಿಕಾರಿ ಮತ್ತು ಜ್ಯೇಷ್ಠ ಪುತ್ರನನ್ನು, ಬೆರಳೆಣಿಕೆಯಷ್ಟೂ ಜನರಿಲ್ಲದ ರುದ್ರಭೂಮಿಯಲ್ಲಿ ಅಡ್ಡಾದಿಡ್ಡಿ ಸಜ್ಜುಗೊಳಿಸಲಾದ ಚಿತೆಯ ಮೇಲೆ, ಸೌದೆಗಳ ನಡುವೆ ಒಂದು ಮರದ ತುಂಡಿನಂತೆ ಅಗ್ನಿಗೆ ಸಮರ್ಪಿಸಲಾಗಿತ್ತು. ಈಗ ಹರಿಲಾಲನಲ್ಲಿ ಒಂದು ಮುಷ್ಟಿಯಷ್ಟು ಮಾತ್ರ ಮೂಳೆಗಳಿದ್ದವು. ಆ ಮೂಳೆಗಳನ್ನು ಮುಚ್ಚುವ ಚರ್ಮದ ಹೊರತು ಅವನ ಶರೀರದಲ್ಲಿ ಬೇರೆ ಇದ್ದುದ್ದಾದರೂ ಏನು?

ಬೆಂಕಿಯಿಂದ ಹೊಗೆಯ ಗುಮ್ಮಟ ಮೇಲೆದ್ದಿತು. ಸೌದೆಗಳು ಚಟಪಟನೆ ಉರಿದವು.

'ಸುರೇಂದ್ರ,' ಕೇಶವಲಾಲರು ಸುರೇಂದ್ರರ ಹೆಗಲ ಮೇಲೆ ಕೈಯಿಟ್ಟರು, 'ಹರಿಲಾಲ ಚಿಕ್ಕಪ್ಪ ಜೀವಮಾನದುದ್ದಕ್ಕೂ ಅಶಾಂತರಾಗಿದ್ದರು. ಅವರ ಹಣೆಯಲ್ಲಿ ಬಹುಶಃ ಶಾಂತಿ ಎಂಬುದು ಬರೆದಿರಲಿಲ್ಲ. ಕೊನೆಯ ಬಾರಿಗೆ ಅವರು ದಿಲ್ಲಿಯಿಂದ ಹೋಗುವಾಗ, 'ತಮ್ಮ ಜೀವನದಲ್ಲಿ ಅಲೆದಾಟ ಮಾತ್ರ ಬರೆಯಲಾಗಿದೆ' ಎಂದಿದ್ದ ಮಾತು ಬಹುಶಃ ಉಚಿತವೇ ಆಗಿತ್ತು.'

'ಆದರೆ...ಆದರೆ...ಕೇಶು ಭೈಯ್ಯಾ ...ಹೀಗೆಲ್ಲಾ ಯಾಕಾಯಿತು?' ಸುರೇಂದ್ರರ ಮನಸ್ಸಿನಲ್ಲಿ ಪ್ರಶ್ನೆಯೊಂದು ಕಾಡುತ್ತಿತ್ತು.

ಕೇಶವಲಾಲರು ಆಕಾಶದೆಡೆಗೆ ಬೆರಳು ಮಾಡಿದರು.

'ಭೈಯ್ಯಾ, ದೇವರ ಮಾಯೆಯಲ್ಲಿ ನಮ್ಮ ಕಲ್ಪನಾಶಕ್ತಿಗಿಂತ ಹೆಚ್ಚು ಗೂಢ ಶಕ್ತಿಯಿರುತ್ತದೆ. ಬಾಪೂ ಸಹ ಇಂಥ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕದಾದರು...'

'ಹರಿಲಾಲರಿಗೆ ಸಾರಾಯಿಯ ಚಟವಿರದಿದ್ದರೆ...'

'ಸುರೇಂದ್ರ, ಮದ್ಯ ಕೆಟ್ಟದ್ದು ಮತ್ತು ಹಾನಿಕಾರಕ ಎಂಬುದು ಸರಿಯೇ.' ಕೇಶವಲಾಲರು ತಮ್ಮ ಮನಸ್ಸಿನಲ್ಲಿದ್ದ ಮಾತನ್ನು ಹೇಳಿದರು, 'ಅದಕ್ಕಿಂತಲೂ ಕೆಟ್ಟಕೆಟ್ಟ ದುರಭ್ಯಾಸಗಳು, ತಮ್ಮನ್ನು ತಾವು ಗಾಂಧಿಯ ಉತ್ತರಾಧಿಕಾರಿಗಳು ಎಂದು ಹೇಳುವ ಎಷ್ಟು ಜನರಲ್ಲಿದೆ ಎಂಬುದು ನಮಗೆ ಗೊತ್ತಿಲ್ಲ. ಸುರೇಂದ್ರ, ನಾನು ಹರಿಲಾಲರನ್ನು ಬಾಲ್ಯದಿಂದಲೂ ನೋಡಿದ್ದೇನೆ, ಅವರನ್ನು ಅರಿತಿದ್ದೇನೆ. ಆದರೆ ಪರಿಸ್ಥಿತಿಗಳು ಅವರಿಗೆ ವಿರುದ್ಧವಾದ ಶಿಕ್ಷಣವನ್ನು ಕೊಟ್ಟಿತು.'

'ಕೇಶು ಭೈಯ್ಯಾ, ಇದೇನು ಹೇಳುತ್ತಿದ್ದೀರ?'

'ನಿಜವನ್ನೇ ಹೇಳುತ್ತಿದ್ದೇನೆ. ಒಂದು ವೇಳೆ ಪರಿಸ್ಥಿತಿಗಳು ಅನುಕೂಲವಾಗಿದ್ದರೆ ಅವರು ಬೇರೆ ಎಲ್ಲರಿಗಿಂತ ಮುಂದಕ್ಕೆ ಹೋಗುತ್ತಿದ್ದರು. ಅವರು ನಮ್ಮ ಭರವಸೆಗಳಿಗಿಂತ ಹೆಚ್ಚು ಬುದ್ಧಿ ಮತ್ತು ಬುದ್ಧಿವಂತಿಕೆಯನ್ನು ತೋರಿಸಿದ್ದರೆ...ನನಗೆ ಒಂದೇ ಸಮನೆ ಏನು ಅನ್ನಿಸುತ್ತಿದೆ ಎಂದರೆ...' ಕೇಶವಲಾಲರಿಗೆ ದುಃಖ ಉಕ್ಕಿ ಬಂತು.

'ಏನು ಅನ್ನಿಸುತ್ತಿದೆ, ಕೇಶು ಭೈಯ್ಯಾ?'

'ಜಗತ್ತು ಏನು ಹೇಳಬೇಕೆಂದಿದೆಯೋ, ಅದನ್ನು ಹೇಳಲಿ...ಹರಿಲಾಲರು ತಮ್ಮ ಜೀವನವನ್ನು ಹೇಗಾದರೂ ಕಳೆದಿರಲಿ...ಆದರೆ ಅವರು ಕೆಟ್ಟವರಾಗಿರಲಿಲ್ಲ. ನಾವೆಲ್ಲರೂ ಸಹ ದುರ್ದೈವಿಗಳು...ಯಾಕೆಂದರೆ...ನಾವು ಮತ್ತೊಬ್ಬ ಗಾಂಧಿಯನ್ನು ಕಳೆದುಕೊಂಡೆವು.' ಕೇಶವಲಾಲರು ಒತ್ತಿ ಬಂದ ದುಃಖದಿಂದ ನೆಲವನ್ನು ನೋಡಿದರು.

ಸ್ಮಶಾನದ ಕಾವಲುಗಾರ ಹರಿಲಾಲನ ಚಟಪಟ ಸದ್ದಿನೊಂದಿಗೆ ಉರಿಯುತ್ತಿದ್ದ ಚಿತೆಯ ಸೌದೆಗಳನ್ನು ಉದ್ದನೆಯ ಕೋಲಿನಿಂದ ಅತ್ತ ಇತ್ತ ಹೊರಳಿಸುತ್ತಿದ್ದ; ಬೇರೆ ಸೌದೆಗಳೊಂದಿಗೆ ಉರಿಯುತ್ತಿದ್ದ ಹರಿಲಾಲನ ದೇಹವನ್ನು ಅವುಗಳೊಂದಿಗೆ ತಳ್ಳುತ್ತಿದ್ದ. ಯಾರೋ ಒಬ್ಬರು ಮುಷ್ಟಿ ಉಪ್ಪು ಮತ್ತು ಎಳ್ಳನ್ನು ಉರಿಯುವ ಚಿತೆಗೆ ಹಾಕಿದರು. ಚಟಪಟ ಸದ್ದಿನೊಂದಿಗೆ ಜ್ವಾಲೆಗಳು ಮೇಲೆದ್ದವು.

(ಮುಗಿಯಿತು)